# All India Radio: Bangalore
# National Bulletin In Kannada
# 03.07.2025 / 7.35 am

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು :

೧. ಪ್ರಧಾನಮಂತ್ರಿ ನರೇಂದ್ರ ಮೋದಿ ಘಾನಕ್ಕೆ ಭೇಟಿ - ದ್ವಿಪಕ್ಷೀಯ ಸಮಾಲೋಚನೆ

೨. ಇದೇ ೨೧ರಿಂದ ಸಂಸತ್ತಿನ ಮಳೆಗಾಲದ ಅಧಿವೇಶನ ಕರೆಯುವ ಪ್ರಸ್ತಾವಕ್ಕೆ ರಾಷ್ಟ್ರಪತಿ ಒಪ್ಪಿಗೆ

೩. ಪವಿತ್ರ ಅಮರನಾಥ ಯಾತ್ರೆ ಇಂದು ಭಾರೀ ಭಿಗಿ ಭದ್ರತೆಯಲ್ಲಿ ಆರಂಭ

೪. ಇಎಲ್ಐ ಯೋಜನೆಯ ಮೂಲಕ ನಾಲ್ಕು ವರ್ಷಗಳಲ್ಲಿ ೧ ಲಕ್ಷ ಕೋಟಿ ನೆರವು - ಮನ್ಸುಖ್ ಮಾಂಡವಿಯ

೫. ಕ್ರಿಕೆಟ್ - ಇಂಗ್ಲೆಂಡ್ ವಿರುದ್ಧದ ಎರಡನೇ ಟೆಸ್ಟ್ ಪಂದ್ಯದಲ್ಲಿ ಉತ್ತಮ ಮೊತ್ತದತ್ತ ಭಾರತ

><><><><><><><><><><><><

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಕಳೆದ ರಾತ್ರಿ ಘಾನಕ್ಕೆ ಭೇಟಿ ನೀಡಿದರು. ಅವರಿಗೆ ವಿಮಾನ ನಿಲ್ದಾಣದಲ್ಲಿ ಅಧ್ಯಕ್ಷ ಜಾನ್ ದ್ರಮಣಿ ಮಹಾಮ ಅವರು ಸಾಂಪ್ರದಾಯಿಕ ರೀತಿಯಲ್ಲಿ ಸ್ವಾಗತಿಸಿದರು. ನಂತರ ಪ್ರಧಾನಿ ಅವರು ನಿಯೋಗ ಮಟ್ಟದ ಮಾತುಕತೆಗಳನ್ನು ನಡೆಸಿದರು. ಆನಂತರ ಜಂಟಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಭಾರತ ಮತ್ತು ಘಾನ ಸಹಭಾಗಿತ್ವವನ್ನು ಸಮಗ್ರ ಪಾಲುದಾರಿಕೆ ರೂಪಕ್ಕೆ ವಿಸ್ತರಿಸಲು ನಿರ್ಧರಿಸಿವೆ ಎಂದು ಪ್ರಕಟಿಸಿದರು.

ಉಭಯ ದೇಶಗಳು ಹಾಲಿ ಇರುವ ತನ್ನ ವ್ಯಾಪಾರ , ಬಂಡವಾಳ ಹೂಡಿಕೆ , ಕೃಷಿ, ಡಿಜಿಟಲ್ ತಂತ್ರಜ್ಞಾನ , ಸಾಮರ್ಥ್ಯ ವೃದ್ಧಿ, ಮೂಲಸೌಕರ್ಯ ಮತ್ತು ಜನರ ನಡುವಿನ ಸಂಬಂಧಗಳ ಬಗ್ಗೆ ಚರ್ಚಿಸಲಾಯಿತು. ಘಾನದಲ್ಲಿ ಭಾರತದ ಹೂಡಿಕೆಯನ್ನು ಸ್ವಾಗತಿಸಲಾಯಿತು ಮತ್ತು ರಕ್ಷಣಾ ಹಾಗೂ ಭದ್ರತಾ ಸಹಕಾರದ ಬಗ್ಗೆ ಸಮಾಲೋಚನೆ ನಡೆಸಲಾಯಿತು ಎಂದು ಹೇಳಿದರು. ಮಾತುಕತೆಯ ಬಳಿಕ ಸಂಸ್ಕೃತಿ, ಮಾನದಂಡ, ಆಯುರ್ವೇದ ಹಾಗೂ ಸಾಂಪ್ರದಾಯಿಕ ವೈದ್ಯಕೀಯ ಪದ್ಧತಿ ಸೇರಿದಂತೆ ವಿವಿಧ ಅಂಶಗಳನ್ನು ಒಳಗೊಂಡ ನಾಲ್ಕು ಒಡಂಬಡಿಕೆಗಳಿಗೆ ಸಹಿ ಹಾಕಲಾಯಿತು. ಆನಂತರ ಅಧ್ಯಕ್ಷ ಮಹಾಮ ಅವರು ಪ್ರಧಾನಿ ಅವರಿಗೆ ರಾಷ್ಟ್ರೀಯ ಗೌರವವನ್ನು ಸಲ್ಲಿಸಿದರು.

><><><><><><><><><><><><

ಪಂಚರಾಷ್ಟ್ರಗಳ ಪ್ರವಾಸದಲ್ಲಿರುವ ಪ್ರದಾನ ಮಂತ್ರಿ ನರೇಂದ್ರ ಮೋದಿ ಅವರಿಂದು ತಮ್ಮ ಪ್ರವಾಸದ ಎರಡನೇ ಚರಣದಲ್ಲಿ ಟ್ರಿನಿಡಾಡ್ ಮತ್ತು ಟೋಬ್ಯಾಗೋ ಗೆ ಭೇಟಿ ನೀಡಲಿದ್ದಾರೆ. ಅಲ್ಲಿ ಅವರು ಅಧ್ಯಕ್ಷ ಕ್ರಿಸ್ಟಿನ್ ಕಾರ್ಲಾ ಕಾಂಗಲೂ ಮತ್ತು ಪ್ರಧಾನ ಮಂತ್ರಿ ಕಮ್ಲಾ ಪೆರ್ಸಾದ್ - ಬಿಸೆಸ್ಸಾರ್ ಅವರನ್ನು ಭೇಟಿ ಮಾಡಲಿದ್ದಾರೆ ಮತ್ತು ದ್ವಿಪಕ್ಷೀಯ ಸಂಬಂಧಗಳ ಬಗ್ಗೆ ಚರ್ಚೆ ನಡೆಸಲಿದ್ದಾರೆ. ಟ್ರಿನಿಡಾಡ್ ಮತ್ತು ಟೋಬ್ಯಾಗೋ ಗೆ ಭಾರತೀಯ ವಲಸಿಗರು ಭೇಟಿ ನೀಡಿ ೧೮೦ ವರ್ಷಗಳು ಪೂರೈಸಿರುವ ಹಿನ್ನೆಲೆಯಲ್ಲಿ ಪ್ರಧಾನಿ ಅವರ ಈ ಭೇಟಿ ಅತ್ಯಂತ ಮಹತ್ವೆಂದು ಪರಿಗಣಿಸಲಾಗಿದೆ. ಉಭಯ ದೇಶಗಳ ನಾಯಕರು ಡಿಜಿಟಲ್ ಪರಿವರ್ತನೆ, ಆಹಾರ ಸಂಸ್ಕರಣೆ, ವ್ಯಾಪರ , ಆರೋಗ್ಯ, ಸಾಗರ ಭದ್ರತೆ, ಸಾರಿಗೆ ಮತ್ತು ಒಟ್ಟಾರೆ ಆರ್ಥಿಕ ಮತ್ತು ಸಾಂಸ್ಕೃತಿಕ ಸಹಕಾರದ ಬಗ್ಗೆ ಚರ್ಚೆ ನಡೆಸುವ ಸಾಧ್ಯತೆ ಇದೆ . ಅಲ್ಲದೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಟ್ರಿನಿಡಾಡ್ ಮತ್ತು ಟೋಬ್ಯಾಗೋ ಸಂಸತ್ತನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ ಮತ್ತು ಅನಿವಾಸಿ ಭಾರತೀಯರೊಂದಿಗೆ ಸಂವಾದ ನಡೆಸಲಿದ್ದಾರೆ.

><><><><><><><><><><><><

ಜುಲೈ ೨೧ ರಿಂದ ಆಗಸ್ಟ್ ೨೧ ರವರೆಗೆ ಸಂಸತ್ತಿನ ಮಳೆಗಾಲದ ಅಧಿವೇಶನವನ್ನು ಕರೆಯುವ ಸರ್ಕಾರದ ಪ್ರಸ್ತಾವನೆಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅನುಮೋದಿಸಿದ್ದಾರೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ತಿಳಿಸಿದ್ದಾರೆ. ಸ್ವಾತಂತ್ರ್ಯ ದಿನಾಚರಣೆಯ ಹಿನ್ನೆಲೆಯಲ್ಲಿ ಆಗಸ್ಟ್ ೧೩ ಮತ್ತು ೧೪ ರಂದು ಯಾವುದೇ ಅಧಿವೇಶನ ಇರುವುದಿಲ್ಲ ಎಂದು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಮಾಹಿತಿ ನೀಡಿದ್ದಾರೆ.

><><><><><><><><

ಪವಿತ್ರ ಅಮರನಾಥ ಯಾತ್ರೆಗೆ ಇಂದು ಚಾಲನೆ ದೊರೆಯಲಿದೆ. ೩೮ ದಿನಗಳ ಅಮರನಾಥ ಯಾತ್ರೆ ಇಂದು ದಕ್ಷಿಣ ಕಾಶ್ಮೀರದ ಪಹಲ್ಗಾಮ್ ಮತ್ತು ಮಧ್ಯ ಕಾಶ್ಮೀರದ ಗಂಡೆರ್‌ಬಾಲ್ ಜಿಲ್ಲೆಯ ಬಾಲ್ತಾಲ್ ಜೋಡಿ ಮಾರ್ಗಗಳಿಂದ ಬಿಗಿ ಭದ್ರತೆಯ ನಡುವೆ ಔಪಚಾರಿಕವಾಗಿ ಆರಂಭವಾಗಲಿದೆ.

ಕಾಶ್ಮೀರ ಪ್ರದೇಶದ ಹಿಮಾಲಯದಲ್ಲಿ ೧೨ ಸಾವಿರದ ೭೫೬ ಅಡಿ ಎತ್ತರದಲ್ಲಿರುವ ಅಮರನಾಥ ಗುಹೆಯಲ್ಲಿ ಹಿಮದ ಶಿವಲಿಂಗ ರೂಪುಗೊಳ್ಳುವುದನ್ನು ನೋಡಲು ಭಕ್ತಾದಿಗಳು ಆಗಮಿಸುತ್ತಾರೆ. ಬಲ್ತಾಲ್ ಮಾರ್ಗದ ಕಡೆಗೆ ೨ ಸಾವಿರದ ೩೦೦ ಕ್ಕೂ ಹೆಚ್ಚು ಯಾತ್ರಿಕರನ್ನು ಹೊತ್ತ ಸುಮಾರು ೨೯೯ ವಾಹನಗಳು ಮತ್ತು ಪಹಲ್ಗಾಮ್ ಮಾರ್ಗದ ಕಡೆಗೆ ಮತ್ತು ೩ ಸಾವಿರಕ್ಕೂ  ಕ್ಕೂ ಹೆಚ್ಚು ಯಾತ್ರಿಕರನ್ನು ಶ್ರೀನಗರ ಜಮ್ಮು ರಾಷ್ಟ್ರೀಯ ಹೆದ್ದಾರಿಯ ಮೂಲಕ ಕಾಶ್ಮೀರ ಪ್ರದೇಶವನ್ನು ಸುರಕ್ಷಿತವಾಗಿ ತಲುಪಿದೆ. ಕಾಶ್ಮೀರ ಕಣಿವೆಗೆ ಬಂದ ನಂತರ ಜೈಕಾರ ಹಾಕುತ್ತಿದ್ದ ಯಾತ್ರಿಕರಿಗೆ  ಸ್ಥಳೀಯರು, ನಾಗರಿಕ ಸಮಾಜ ಸದಸ್ಯರು ಮತ್ತು ಜಿಲ್ಲಾಡಳಿತದಿಂದ ಭವ್ಯ ಸ್ವಾಗತ ದೊರೆಯಿತು.

><><><><><><><><

ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಮೂರು ದಿನಗಳ ತಮ್ಮ ಯುಎಇ ಪ್ರವಾಸವನ್ನು ಮುಕ್ತಾಯಗೊಳಿಸಿದ್ದು ಉಭಯ ರಾಷ್ಟ್ರಗಳ ನಡುವಿನ ದ್ವಿಪಕೀಯ ವ್ಯಾಪಾರ ಸಂಬಂಧ ಮತ್ತು ಕೈಗಾರಿಕಾ ಸಹಕಾರ ಸಂಬಂಧ ವೃದ್ಧಿ ನಿಟ್ಟಿನಲ್ಲಿ ಉನ್ನತ ಮಟ್ಟದ ಮಾತುಕತೆಗಳನ್ನು ನಡೆಸಿದರು.  ನಿಯೋಗದಲ್ಲಿ ಉಕ್ಕು ಉದ್ಯಮದ ಪ್ರಮುಖ ಕಂಪನಿಗಳ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು . ಸಚಿವರು ತಮ್ಮ ಭೇಟಿಯ ವೇಳೆ ದುಬೈ ನಲ್ಲಿ ಪ್ರಮುಖ ಕಂಪನಿಗಳ ಅಂತಾರಾಷ್ಟ್ರೀಯ ಕಚೇರಿಗಳನ್ನು ಉದ್ಘಾಟಿಸಿದರು. ಕುಮಾರಸ್ವಾಮಿ ಅವರು ಯುಎಇ ಯ ಆರ್ಥಿಕ ಮತ್ತು ಪ್ರವಾಸೋದ್ಯಮ ಸಚಿವರೊಂದಿಗೆ ವ್ಯಾಪಾರ ಹಾಗೂ ಆರ್ಥಿಕ ಸಂಬಂಧಗಳ ಬಲವರ್ಧನೆಯ ಬಗ್ಗೆ ಚರ್ಚಿಸಿದರು.  ಸಚಿವರು ದುಬೈನಲ್ಲಿನ ಅನಿವಾಸಿ ಕನ್ನಡಿಗರೊಂದಿಗೆ ಸಂವಾದ ನಡೆಸಿದರು.

><><><><><><><><

ಉದ್ಯೋಗ ಆಧಾರಿತ ಪ್ರೋತ್ಸಾಹ ಯೋಜನೆ - ಇ ಎಲ್ ಐ ಮೂಲಕ ಮುಂದಿನ ನಾಲ್ಕು ವರ್ಷಗಳಲ್ಲಿ ಉದ್ಯೋಗಿಗಳು ಮತ್ತು ಉದ್ಯೋಗದಾತರಿಗೆ ಒಂದುಲಕ್ಷ ಕೋಟಿ ರೂಪಾಯಿ ನೆರವು ನೀಡಲಾಗುವುದೆಂದು ಕೇಂದ್ರ ಕಾರ್ಮಿಕ ಮತ್ತು ಔದ್ಯೋಗಿಕ ಸಚಿವ ಮನ್ಸುಖ್ ಮಾಂಡವಿಯ ತಿಳಿಸಿದ್ದಾರೆ. ದೆಹಲಿಯಲ್ಲಿ ನಿನ್ನೆ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸರ್ಕಾರದ ಉದ್ಯೋಗ ಕೇಂದ್ರಿತ ನೀತಿಯ ಅನ್ವಯ ಯೋಜನೆ ರೂಪಿಸಲಾಗಿದೆ. ಇದರಡಿ ನಿರುದ್ಯೋಗಿ ಯುವಕರು ಹೊಸದಾಗಿ ಉದ್ಯೋಗ ಪಡೆದ ನಂತರ ವರ್ಷಕ್ಕೆ ಎರಡು ಬಾರಿ ೭ ಸಾವಿರದ ೫೦೦ ರೂಪಾಯಿ ಆರ್ಥಿಕ ನೆರವು ಪಡೆಯಲಿದ್ದಾರೆ ಎಂದರು.

><><><><><><><><

ಪಾಕಿಸ್ತಾನದಿಂದಾಗಿ ಭಾರತದ ಮತ್ತು ಅಮೆರಿಕದ ನಡುವಿನ ಸಂಬಂಧದ ಮೇಲೆ ಪರಿಣಾಮ ಬೀರುವುದಿಲ್ಲ ಎಂದು ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಹೇಳಿದ್ದಾರೆ.  ವಾಷಿಂಗ್ಟನ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು, ಭಾರತ-ಅಮೆರಿಕ ಸಂಬಂಧಗಳು ಪರಸ್ಪರ ಹಿತಾಸಕ್ತಿಗಳ ಮೇಲೆ ನಿರ್ಮಿಸಲ್ಪಟ್ಟಿವೆ, ಮೂರನೇ ದೇಶಗಳ ಮೇಲೆ ಅಲ್ಲ ಎಂದು ಒತ್ತಿ ಹೇಳಿದರು.  ನಾವು ಇತರರನ್ನು ಆಧರಿಸಿ ನಮ್ಮನ್ನು ವ್ಯಾಖ್ಯಾನಿಸಿಕೊಳ್ಳುವುದನ್ನು ನಿಲ್ಲಿಸಬೇಕು ಮತ್ತು ಭಾರತ-ಅಮೆರಿಕದಂತಹ ದೊಡ್ಡ ಸಂಬಂಧಗಳು ಹಂಚಿಕೆಯ ಪ್ರಯೋಜನಗಳು, ವ್ಯಾಪಾರ, ಹೂಡಿಕೆ, ತಂತ್ರಜ್ಞಾನ, ಇಂಧನ ಮತ್ತು ಚಲನಶೀಲತೆಯನ್ನು ಆಧರಿಸಿವೆ ಎಂದು ಹೇಳಿದರು. ಆಪರೇಷನ್ ಸಿಂಧೂರ್ ನಂತರ ಭಾರತ ಮತ್ತು ಪಾಕಿಸ್ತಾನದ ನಡುವೆ ಕದನ ವಿರಾಮವನ್ನು ಮಧ್ಯಸ್ಥಿಕೆ ಮಾಡಲು ಸಹಾಯ ಮಾಡಿದ್ದೇನೆ ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಹೇಳಿಕೆಯನ್ನು ಡಾ. ಜೈಶಂಕರ್ ತಳ್ಳಿಹಾಕಿದರು. ದಾಖಲೆ ಸ್ಪಷ್ಟವಾಗಿದೆ, ಕದನ

ವಿರಾಮವನ್ನು ಎರಡೂ ದೇಶಗಳ ಮಿಲಿಟರಿ ಅಧಿಕಾರಿಗಳು ನೇರವಾಗಿ ಮಾತುಕತೆ ನಡೆಸಿದ್ದಾರೆ ಎಂದು ತಿಳಿಸಿದರು.

><><><><><><><><><

ಬರ್ಮಿಂಗ್ಹ್ಯಾಮ್‌ನ ಎಜ್‌ಬಾಸ್ಟನ್‌ನಲ್ಲಿ ನಡೆಯುತ್ತಿರುವ ಭಾರತ-ಇಂಗ್ಲೆಂಡ್ ನಡುವಿನ ಆಂಡರ್ಸನ್-ತೆಂಡೂಲ್ಕರ್ ಟ್ರೋಫಿ ಸರಣಿಯ ಎರಡನೇ ಟೆಸ್ಟ್‌ನ ಮೊದಲ ದಿನದಾಟದ ಅಂತ್ಯಕ್ಕೆ ಭಾರv, ಇಂಗ್ಲೆಂಡ್ ವಿರುದ್ಧ ಐದು ವಿಕೆಟ್‌ಗಳ ನಷ್ಟಕ್ಕೆ ೩೧೦ ರನ್ ಗಳಿಸಿದೆ. ನಾಯಕ ಶುಭಮನ್ ಗಿಲ್ ೧೧೪ ರನ್‌ಗಳೊಂದಿಗೆ ಮತ್ತು ರವೀಂದ್ರ ಜಡೇಜಾ ೪೧ ರನ್‌ಗಳೊಂದಿಗೆ ಕ್ರೀಸ್‌ನಲ್ಲಿದ್ದಾರೆ. ಯಶಸ್ವಿ ಜೈಸ್ವಾಲ್ ೮೭ ರನ್‌ಗಳಿಸಿದರು. ಇಂಗ್ಲೆಂಡ್ ಪರ ಕ್ರಿಸ್ ವೋಕ್ಸ್ ೨ ವಿಕೆಟ್‌ಗಳನ್ನು ಪಡೆದಿದ್ದಾರೆ. ಇದಕ್ಕೂ ಮೊದಲು, ಟಾಸ್ ಗೆದ್ದ ಇಂಗ್ಲೆಂಡ್ ಬೌಲಿಂಗ್ ಆಯ್ಕೆ ಮಾಡಿಕೊಂಡಿತು. ಭಾರತ ತಂಡ ಈ ಪಂದ್ಯದಲ್ಲಿ ಮೂರು ಮಹತ್ವದ ಬದಲಾವಣೆಗಳನ್ನು ಮಾಡಿದೆ. ಜಸ್ಪ್ರೀತ್ ಬುಮ್ರಾಗೆ ವಿಶ್ರಾಂತಿ ನೀಡಿದ್ದು, ವೇಗಿ ಆಕಾಶ್ ದೀಪ್ ಅವಕಾಶ ಕೊಟ್ಟಿದೆ. ಶಾರ್ದೂಲ್ ಠಾಕೂರ್ ಮತ್ತು ಸಾಯಿ ಸುದರ್ಶನ್ ಬದಲಿಗೆ ಆಲ್‌ರೌಂಡರ್‌ಗಳಾದ ವಾಷಿಂಗ್ಟನ್ ಸುಂದರ್ ಮತ್ತು ನಿತೀಶ್ ಕುಮಾರ್ ರೆಡ್ಡಿ ಅವರನ್ನು ಸೇರಿಸಿಕೊಳ್ಳಲಾಗಿದೆ. ಎರಡನೇ ಟೆಸ್ಟ್‌ಗೆ ಆತಿಥೇಯ ತಂಡದಲ್ಲಿ ಯಾವುದೇ ಬದಲಾಣೆಗಳಿಲ್ಲ.

ಐದು ಪಂದ್ಯಗಳ ಸರಣಿಯಲ್ಲಿ ಲೀಡ್ಸ್‌ನ ಹೆಡಿಂಗ್ಲಿಯಲ್ಲಿ ನಡೆದ ಮೊದಲ ಟೆಸ್ಟ್‌ನಲ್ಲಿ, ಇಂಗ್ಲೆಂಡ್ ಭಾರತವನ್ನು ಐದು ವಿಕೆಟ್‌ಗಳಿಂದ ಸೋಲಿಸಿ ೧-೦ ಯಲ್ಲಿ ಮುನ್ನಡೆಯಲ್ಲಿದೆ.

><><><><><><><><><

ಥೈಲ್ಯಾಂಡ್ ನಲ್ಲಿ ನಡೆದ ಎಎಫ್‌ಸಿ ಮಹಿಳೆಯರ ಫುಟ್‌ಬಾಲ್ ಏಷ್ಯಯನ್ ಕಪ್ ೨೦೨೬ ಅರ್ಹತಾ ಪಂದ್ಯಾವಳಿಯಲ್ಲಿ ಭಾರತ ಇರಾಕ್ ವಿರುದ್ಧ ೫-೦ ಇಂದ ಗೆಲುವು ಸಾಧಿಸಿದೆ. ಮೊದಲಿಗೆ ಸಂಗೀತ ಮತ್ತು ಮನೀಷಾ ಅವರುಗಳು ಗೋಲುಗಳನ್ನು ಹೊಡೆದು ಉತ್ತಮ ಆರಂಭಕ್ಕೆ ನಾಂದಿ ಹಾಡಿದರು ಬಳಿಕ ದ್ವಿತೀಯಾರ್ಧದಲ್ಲಿ ಕಾರ್ತಿಕ, ನಿರ್ಮಲಾದೇವಿ ಮತ್ತು ರತನ್ ಬಾಲಾ ದೇವಿ ಅವರುಗಳು ಗೋಲುಗಳನ್ನು ಗಳಿಸುವ ಮೂಲಕ ಗೆಲುವು ತಂದು ಕೊಟ್ಟರು.

><><><><><><><><><